ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ. 50/2022</u>

............................ ವಿರುದ್ಧ ............................

ಫ್ರಾಸಾ– 03

ಚಾಸಾ– 06

ಹೆಸರು ಃ ವಿಶ್ವನಾಥ ಸುಭಾಶ ಬಾರ್ಕಿ

ತಂದೆಯ ಹಸೆರು ಃ ಸುಭಾಶ ಬಾರ್ಕಿ

ವಯಸ್ಸು ಃ 32 ವರ್ಷ

ಉದ್ಯೋಗ ಃ ಉಪ ವಲಯ ಅರಣ್ಯಾಧಿಕಾರಿ,

ವಾಸ ಃ ಕುಂಬರವಾಡ, ಜೋಯಿಡಾ

ದಿನಾಂಕಃ 06–12–2023 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .

**<u>ಮುಖ್ಯ ವಿಚಾರಣೆ. ಎ. ಪಿ. ಪಿ. ವಕೀಲರಿಂದ</u>**

ನಾನು 2018 ರಿಂದ ಇಲ್ಲಿಯವರೆಗೆ ಕುಂಬರವಾಡ ವಲಯದಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 02–12–2021 ರಂದು ಚಾಸಾ 24 ರವರು ನನಗೆ ಕರೆ ಮಾಡಿ ಆರೋಪಿಯು ನಾಡ ಬಂದೂಕಿಗೆ ಸಂಬಂಧಿಸಿದಂತೆ ಠಾಣೆಗೆ ಬಂದಿದ್ದು, ಅವರು ಸ್ಥಳವನ್ನು ತೋರಿಸುವವರಿದ್ದು, ನನಗೆ ಪಂಚರಾಗಲು ಕೋರಿ ಅವರು ಒಪ್ಪಿದ ಮೇರೆಗೆ, ನಾನು ಠಾಣೆಗೆ ಹೋಗಿದ್ದು, ಅಲ್ಲಿ ಚಾಸಾ 7 ರವರು ಸಹ ಹಾಜರಿದ್ದರು. ಆಗ ಆರೋಪಿಯು ನಾವು ಅವರೊಂದಿಗೆ ಹೋದಲ್ಲಿ ದಿಃ 08-06-2021 ರಂದು ತನ್ನ ಬೈಕ ಹಾಗೂ ಬಂದೂಕನ್ನು ಬಿಟ್ಟು ಹೋದ ಸ್ಥಳವನ್ನು ತೋರಿಸುವುದಾಗಿ

ತಿಳಿಸಿರುತ್ತಾನೆ. ದಿಃ 02-12-2021 ರಂದು ಆರೋಪಿತನು ನೀಡಿದ ಸ್ವ ಖುಷಿ ಹೇಳಿಕೆಯ ಸದ್ರಿ ಭಾಗವನ್ನು ನಿಪಿ 6 ಎಂದು ಗುರುತಿಸಲಾಯಿತು. ಅಲ್ಲಿಂದ ಮದ್ಯಾಹ್ನ 2-15 ಗಂಟೆಗೆ ಪೊಲೀಸ ಸಿಬ್ಬಂದಿಗಳೊಂದಿಗೆ ನಾವು ಪಂಚರು ಹಾಗೂ ಆರೋಪಿಯು ಸೇರಿ ಪೊಲೀಸ್ ಜೀಪನಲ್ಲಿ ಕೆಲೋಲಿ, ಜೋಯಿಡಾ ಗ್ರಾಮಕ್ಕೆ ಹೋದಾಗ, ರಾಮ ಬೀಸೋ ಗದ್ದೆಯ ಮುಂಭಾಗದಲ್ಲಿ ವಾಹನವನ್ನು ನಿಲ್ಲಿಸುವಂತೆ ಸೂಚಿಸಿದ್ದು, ನಾವೆಲ್ಲ ಅವರ ಹಿಂದೆ ಹೋದಾಗ ಸದ್ರಿ ಗದ್ದೆಯಲ್ಲಿ ಕಾಜು ಗಿಡದ ಬಳಿ ಹೋಗಿ ಕೃತ್ಯಕ್ಕೆ ಬಳಸಿದ ಬೈಕನ್ನು ಅಲ್ಲಿಯೇ ನಿಲ್ಲಿಸಿ ಹೋಗಿರುವುದಾಗಿ ತಿಳಿಸಿರುತ್ತಾರೆ. ನಂತರ ಮದ್ಯಾಹ್ನ 02-15 ರಿಂದ 03-50 ರ ವರಗೆ ಪಂಚನಾಮೆಯನ್ನು ಜರುಗಿಸಿ ರುತ್ತೇವೆ. ಆ ಕಾಲಕ್ಕೆ ಕಚ್ಚಾ ನಕಾಶೆಯನ್ನು ಹಾಗೂ ಪೋಟೋವನ್ನು ತೆಗೆದಿರುತ್ತೇವೆ. ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ಈಗಾ ನಿಪಿ 7 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ 7 ಎ ಎಂದು ಗುರುತಿಸಲಾಯಿತು.

ಕಚ್ಚಾನಕಾಶೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಕಚ್ಚಾನಕಾಶೆಯನ್ನು ಈಗಾ ನಿಪಿ 8 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ 8 ಎ ಎಂದು ಗುರುತಿಸಲಾಯಿತು. ಒಂದು ಪೋಟೋವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾ ನಿಪಿ 9 ಎಂದು ಗುರುತಿಸಲಾಯಿತು. ಸದ್ರಿ ಪೋಟೋಗೆ ಸಂಬಂಧಿಸಿದ 65 ಬಿ ಪ್ರಮಾಣ ಪತ್ರವನ್ನು ನಿಪಿ 9 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲುಃ</u> ಆರೋಪಿ ಪರವಾಗಿ ಶ್ರೀ ಮತಿ. ಎಸ್.ಎಸ್.ಕೆ ವಕೀಲರಿಂದ.

1. ಪಂಚನಾಮೆಗೂ ಮುನ್ನ ನನಗೆ ಪೊಲೀಸರು ನೋಟೀಸನ್ನು ನೀಡಿರುತ್ತಾರೆ. ನಾನು ಪಂಚನಾಮೆಗೆ ಹೋಗುವುದಾಗಿ ನನ್ನ ಮೇಲಾಧಿಕಾರಿಗಳಿಂದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ನಾನು ದಿನಚರಿಯ ಡೈರಿಯಲ್ಲಿ ನಾನು ಪಂಚನಾಮೆಗೆ ಹೋಗುತ್ತಿರುವುದನ್ನು ಸೂಚಿಸಿರುತ್ತೇನೆ. ನಾನು ಖಾಲಿ ಬಿಳಿ ಹಾಳೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಪೊಲೀಸ ಸಿಬ್ಬಂದಿಯವರು ಗಣಕೀಕೃತ ಮಾಡಿರುತ್ತಾರೆ. ಅವರ ಹೆಸರು ನನಗೆ ನೆನಪಿಲ್ಲಾ. ಕಚ್ಚಾ ನಕಾಶೆಯನ್ನು ಪೊಲೀಸರು ಸಮಕ್ಷಮ ನಾವೇ ಪಂಚರೇ ತಯಾರಿಸಿರುತ್ತೇವೆ. ನಾನು ಜೋಯಿಡಾ ಪೊಲೀಸ್

ಠಾಣೆಯಿಂದ ಜೀಪನಲ್ಲಿ ಹೊರಟಿರುತ್ತೇವೆ. ವಾಪಸಾ ಬರುವಾಗ ಕುಂಬರವಾಡದಲ್ಲಿಯೇ ಇಳಿದುಕೊಂಡಿರುತ್ತೇನೆ. ಫೋಟೋಗಳನ್ನು ಪೊಲೀಸ ಸಿಬ್ಬಂದಿಯವರೇ ತೆಗೆದಿರುತ್ತಾರೆ. ಅವರ ಹೆಸರು ನನಗೆ ನೆನಪಿಲ್ಲಾ.

2. ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ನಾನು ಸಾಕ್ಷಿಯನ್ನು ನುಡಿಯುವುದಕ್ಕಿಂತಲೂ ಮೊದಲು ನ್ಯಾಯಾಲಯದ ಹೊರಗೆ ಕಡತವನ್ನು ತೆಗೆದುಕೊಂಡು ಓದುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮನ್ನು ಪಂಚನಾಮೆಗೆ ಕರೆದುಕೊಂಡು ಹೋಗಿರುವುದಿಲ್ಲ, ನಮಗೆ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಇಲಾಖೆಯ ಕೆಲಸದಲ್ಲಿ ಸಹಾಯ ಮಾಡುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಯವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಹಾಗೂ ನನ್ನ ಸಮಕ್ಷಮ ಯಾವುದೇ ಫೋಟೋವನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಕಚ್ಚಾ ನಕಾಶೆಯನ್ನು ನಮ್ಮ ಸಮಕ್ಷಮ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.